ದಿನಾಂಕಃ 04–06–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ಎಲ್ಲಾ ಪ್ರತಿವಾದಿಗಳ ಹಿರಿಯರು ಪಾಳಗೇರೆ ಚನ್ನಬಸಪ್ಪ ಎಂದರೆ ಸರಿ. ಸದರಿ ಪಾಳೆಗೇರಿ ಚೆನ್ನಬಸಪ್ಪನ ತಂದೆಯ ಹೆಸರು ಚನ್ನಬಸಪ್ಪ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಳೆಗೇರಿ ಚೆನ್ನಬಸಪ್ಪನ ತಂದೆಯುವರನ್ನು ನೋಡಿರುವುದಿಲ್ಲ. ಸದರಿಯವರ ತಂದೆ ನಾನು ಜನಿಸುವ ಪೂರ್ವ ಮೃತಪಟ್ಟಿರುತ್ತಾರೆ. ಸದರಿ ಪಾಳೆಗೇರಿ ಚೆನ್ನಬಸಪ್ಪನವರು ನನಗೆ ಬುದ್ದಿ ಬಂದಾಗಿನಿಂದ ಸಂತೆಬೆನ್ನೂರಿನಲ್ಲಿ ವಾಸವಾಗಿದ್ದಾರೆ ಸಾಕ್ಷಿ ನಮ್ಮ ಜಾಗದಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಪಾಳೆಗೇರಿ ಚೆನ್ನಬಸಪ್ಪನವರು ವಾಸವಿರುವ ಮನೆ ಮತ್ತು ನಾವು ವಾಸವಿರುವ ಮನೆ ಬೇರೆ ಬೇರೆ ಎಂದರೆ ಸರಿ. ನಾನು ಚಿಕ್ಕವನಿದ್ದಾಗಿನಿಂದಲೂ ಪಾಳೆಗೇರಿ ಚೆನ್ನಬಸಪ್ಪನವರು ವಾಸಿಸುತ್ತಿದ್ದ ಮನೆ ಅದೇ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಅವರ ವಾರಸುದಾರರು ಸಹ ಅದೇ ಮನೆಯಲ್ಲೆ ಅವರು ಮೃತಪಟ್ಟ ನಂತರ ವಾಸವಿದ್ದಾರೆ ಎಂದರೆ ಸಾಕ್ಷಿ ಸದರಿ ವಾಸವನ್ನು ಬಿಡಲು ಸೂಚಿಸಿದ್ದರು ಸಹ ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪಾಳೆಗೇರಿ ಚೆನ್ನಬಸಪ್ಪನವರು ಮೃತಪಟ್ಟ ತಕ್ಷಣ ವಾಸಮನೆಯನ್ನು ಬಿಡಲು ಕೇಳಿರುತ್ತೇವೆ. ಸದರಿ ಪಾಳೆಗೇರಿ ಚೆನ್ನಬಸಪ್ಪನವರು ಜೀವಂತವಿದ್ದ ಕಾಲಕ್ಕೆ ಸದರಿ ಮನೆಯ ವಾಸವನ್ನು ಬಿಡಲು ಕೇಳಿರುವುದಿಲ್ಲ. ಸದರಿ ಪಾಳೆಗೇರಿ ಚೆನ್ನಬಸಪ್ಪನ ವರು ಮೃತಪಟ್ಟ ತರುವಾಯ ಅವರ ವಾರಸುದಾರರನ್ನು ವಾಸದ ಮನೆಯನ್ನು ಬಿಡುವಂತೆ ನನ್ನ ತಂದೆ ಕೇಳಿರುತ್ತಾರೆ. ಸದರಿ ಸಮಯಕ್ಕೆ ನನ್ನ ತಂದೆ ಪಾಳೆಗೇರಿ ಚನ್ನಬಸಪ್ಪನವರ ವಾರಸುದಾರರ ವಿರುದ್ಧ ಕ್ರಮ ಕೈಗೊಂಡಿರುವುದಿಲ್ಲ. ಸದರಿ ಪಾಳೆಗೇರಿ ಚೆನ್ನಬಸಪ್ಪನ 1996 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಇಸ್ವಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿಯವರು ಮೃತಪಟ್ಟು 26–28 ವರ್ಷಗಳು ಕಳೆದಿವೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆ 2001 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಯ ವಾರಸುದಾರರಾದ ನಾವು ನಮ್ಮ ತಂದೆ ಮೃತಪಟ್ಟ ನಂತರ ಪ್ರತಿವಾದಿಗಳನ್ನು ಮನೆಯನ್ನು ಬಿಟ್ಟುಕೊಡುವಂತೆ 2002 ರಲ್ಲಿ ಕೇಳಿರುತ್ತೇವೆ. ನಮ್ಮ ಮನವಿಯನ್ನು ಪ್ರತಿವಾದಿಗಳು ಕೇಳಿರುವುದಿಲ್ಲ. ಸದರಿ ಪ್ರತಿವಾದಿಗಳು 2002 ನೇ ಸಾಲಿನಲ್ಲಿ ಅವರ ಹೆಸರಿಗೆ ಆಸ್ತಿ ಸಂಬಂಧ ಖಾತೆಯನ್ನು ಮಾಡಿಸಿಕೊಂಡಿದ್ದರು. ಸದರಿ ಖಾತೆಯನ್ನು ಕುರಿತು ನನ್ನ ತಂದೆ ಜೀವಂತವಿದ್ದ ಕಾಲದಲ್ಲಾಗಲಿ ಅಥವಾ ನಾವಾಗಲಿ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಮಾಡಿದ್ದರು ನಾವು ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 2002 ರಲ್ಲಿ ನಾನು ಗ್ರಾಮ ಪಂಚಾಯತಿಯಲ್ಲಿ ಪ್ರಶ್ನಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರದ ಕುರಿತು ಯಾವುದೇ ದಾಖಲೆ ಇರುವುದಿಲ್ಲ. ಸದರಿ ವಿಚಾರದ ಕುರಿತು ಪ್ರತಿವಾದಿಗಳ ಸ್ವಾಧೀನವನ್ನು ಪಡೆಯಲು ನಮಗೇನು ತೊಂದರೆಯಿರಲಿಲ್ಲ ಎಂದರೆ ಸಾಕ್ಷಿ ನಮಗೆ ಬಲ ಇರಲಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ನಮಗೆ ಬುದ್ದಿ ಬಂದಾಗಿನಿಂದಲೂ ಸಹ ಪಾಳೆಗೇರಿ ಚೆನ್ನಬಸಪ್ಪನವರು ಮತ್ತು ಅತನ

ವಾರಸುದಾರರು ತಮ್ಮ ಸ್ವಂತ ಹಕ್ಕಿನಿಂದ ದಾವಾಸ್ತಿಯ ಅನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನಾವು ಅವರಿಗೆ ಆಸ್ತಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಯಲ್ಲಿನ ವಿದ್ಯುತ್‌ಶಕ್ತಿ ಸಂಪರ್ಕ ಪಾಳೆಗೇರಿ ಚೆನ್ನಬಸಪ್ಪನ ಹೆಸರಿನಲ್ಲಿದ್ದು ಅವರು ಮೃತಪಟ್ಟ ತರುವಾಯ ಅವರ ವಾರಸುದಾರರ ಹೆಸರಿನಲ್ಲಿ ಮುಂದುವರೆಯುತ್ತಿದೆ ಎಂದರೆ ಸರಿ.

ಸದರಿ ದಾವಾಸ್ತಿಯ ಮೇಲೆ ಕಂದಾಯವನ್ನು ಪ್ರತಿವಾದಿಗಳೇ ಕಟ್ಟುತ್ತಿದ್ದಾರೆ ಎಂದರೆ ಸಾಕ್ಷಿ 2018 ರಿಂದ ಈಚೆಗೆ ಕಟ್ಟುತ್ತಿದ್ದಾರೆ ಎಂದು ನುಡಿಯುತ್ತಾರೆ. ನನಗೆ ಬುದ್ಧಿಬಂದಾಗಿನಿಂದ ದಾವಾಸ್ತಿಯ ಮೇಲೆ ಕಂದಾಯವನ್ನು ಪಾವತಿಸಿದ ಕುರಿತು ಯಾವುದೇ ದಾಖಲೆ ಇಲ್ಲ. ದಾವಾಸ್ತಿಯನ್ನು ಹೊರತುಪಡಿಸಿ ಸದರಿ ಪಾಳೆಗೇರಿ ಚೆನ್ನಬಸಪ್ಪನಿಗಾಗಲಿ ಅಥವಾ ಅವರ ತಂದೆಗಾಗಲಿ ಯಾವುದೇ ವಾಸದಮನೆ ಸಂತೆಬೆನ್ನೂರಿನಲ್ಲಿ ಇಲ್ಲ ಎಂದರೆ ಸರಿ. ದಾವಾಸ್ತಿಯ ಸಂಬಂಧಪಟ್ಟಂತೆ ದಾಖಲೆಗಳನ್ನು 2001 ರಿಂದ ಈಚೆಗೆ ಪಂಚಾಯತಿಯಲ್ಲಿ ನೋಡುತ್ತಿದ್ದೆನೆ. ಅದರಂತೆ ದಾವಾಸ್ತಿಯ ಖಾತೆ ಪಾಳೆಗೇರಿ ಚೆನ್ನಬಸಪ್ಪನ ಮತ್ತು ಆತನ ವಾರಸುದಾರರ ಹೆಸರಿನಲ್ಲಿ ಮುಂದುವರೆಯುತ್ತಿದೆ ಎಂದರೆ ಸಾಕ್ಷಿ ಅಕ್ರಮವಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವಾಸ್ತಿಯ ಖಾತೆ 1976 ರಿಂದಲೂ ಸಹ ಅವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

ಸಂತೆಬೆನ್ನೂರು ಗ್ರಾಮದ ಖಾನೆ ಸುಮಾರಿ ನಂ 404 ರಲ್ಲಿ ಒಟ್ಟು 3 ಮನೆಗಳು ಇವೆ. ಸದರಿ ಮನೆಗಳು ಹೆಚ್ ನಾಗಪ್ಪನವರ ಹೆಸರಿಗೆ ಒಂದು ಮನೆ, ಜಿ ಹನುಮಪ್ಪನವರ ಹೆಸರಿನಲ್ಲಿ 2 ಮನೆಗಳು ಇದೆ. ಸದರಿ ಜಿ ಹನುಮಂತಪ್ಪನ ಹೆಸರಿನಲ್ಲಿ 2 ಮನೆಗಳು ಇರುವ ಬಗ್ಗೆ ಯಾವುದಾದರೂ ದಾಖಲೆಗಳು ಇರುವುದಿಲ್ಲ. ನಾನು ಹೇಳಿದಂತೆ ಸದರಿ ಹನುಮಂತಪ್ಪಗೌಡ್ರ ಹೆಸರಿನಲ್ಲಿ ಪಂಚಾಯತಿ ದಾಖಲೆಗಳು ಯಾವ ಸಾಲಿನಲ್ಲಿದ್ದವು ಎಂದು ನಾನು ಚಿಕ್ಕವನಿದ್ದ ಕಾರಣ ನನಗೆ ಗೊತ್ತಿಲ್ಲ. ಹಾಗಾಗಿ ನನ್ನ ಅಜ್ಜನ ಹೆಸರಿನಲ್ಲಿ ಪಂಚಾಯತಿ ದಾಖಲೆಗಳಲ್ಲಿ 2 ಮನೆಗಳು ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. 2003 ನಂತರ ನೋಡಿರುತ್ತೇನೆ. ನಾನು ನೋಡಿದ ಕಾಲಕ್ಕೆ ನನ್ನ ಅಜ್ಜನ ಹೆಸರಿನಲ್ಲಿ ಒಂದೇ ಮನೆ ಖಾತೆ ಇತ್ತು.

ಖಾನೆ ಸುಮಾರಿ ನಂ 404 ರಲ್ಲಿ 2012-13, 2013-14 ನೇ ಸಾಲಿನಲ್ಲಿ ಇದ್ದ ಪಂಚಾಯತಿ ದಾಖಲೆಯನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಈಗ ಎರಡು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-1 ಮತ್ತು 2** ಎಂದು ಗುರುತಿಸಲಾಯಿತು. ಸದರಿ ದಾಖಲೆಗಳು 2012-13 ರಿಂದ ಇವೆ ಎಂದರೆ ಸರಿ. ಸದರಿ ನಿಡಿ-1 ಮತ್ತು 2 ರ ದಾಖಲೆಗಳು 2003-04 ರಿಂದ ಇವೆ ಎಂದರೆ ಸಾಕ್ಷಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಂಚಾಯತಿಯಲ್ಲಿ ದಾವಾಸ್ತಿ ಕುರಿತು 1975 ರಿಂದ ಇಂದಿನವರೆಗೂ ದಾಖಲೆಗಳು ಸಿಗುತ್ತವೆ ಎಂದರೆ ಸರಿ. 1975 ರಿಂದಲೂ ಇಂದಿಗೂ ಸಹ ದಾವಾಸ್ತಿಯ ಖಾತೆ ನಮ್ಮ ಕುಟುಂಬದ ಯಾವ ಸದಸ್ಯರ ಹೆಸರಿನಲ್ಲಿಯೂ ಇಲ್ಲ ಎಂದರೆ ಸರಿ.

ಅದರಂತೆ ಅಂದಿನಿಂದ ಇಂದಿನವರೆಗೂ ದಾವಾಸ್ತಿಯ ಖಾತೆ ಪ್ರತಿವಾದಿಗಳ ಕುಟುಂಬದ ಹಿರಿಯ ಹೆಸರಿನಲ್ಲಿ ಮುಂದುವರೆಯುತ್ತಿದೆ ಎಂದರೆ ಸರಿ.

ಸದರಿ ಪಾಳೆಗೇರಿ ಚೆನ್ನಬಸಪ್ಪನನವರು ಮೃತಪಟ್ಟ ನಂತರ ದಾವಾಸ್ತಿಯ ಖಾತೆ ಅವರ ಹೆಂಡತಿ ತೋಳಸಮ್ಮ ಮತ್ತು ಆತನ ಮಗನಾದ ಜಯಪ್ಪನ ಹೆಸರಿನಲ್ಲಿ ಖಾತೆ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ನೋಡಿರುವುದಿಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದರಿಂದ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.